ಅನಿವಾರ್ಯವಾಗಿ ನಾನೂ ಅವರೊಡನೆ ಊಟಕ್ಕೆ ಕೂಡಬೇಕಾಯಿತು.

ಆದರೆ ನನಗೇಕೋ ತುತ್ತು ಗಂಟಲಲ್ಲಿ ಳಿಯದಂತಾಗಿತ್ತು. ಅವರೆಲ್ಲರ ಊಟವಾದ ಮೇಲೆ ವಿಭಾಳಿಗೆ – 'ಈಗಲಾದರೂ ನಾನು ನಿನಗೋಸ್ಕರ ಕಾಯುತ್ತೇನೆ' ಎಂದೆ. ಅವಳು ತನ್ನ ತಟ್ಟೆ ತೆಗೆದುಕೊಂಡು ಬಂದು ಕೂಡುತ್ತ, 'ದಿನಾಲೂ ನಾನು ಅತ್ತೆಗೆ ಮೊದಲೇ ಊಟ ಬಡಿಸಿ ಬಿಡುತ್ತೇನೆ. ಅವರಿಗೆ ಎಡಗೈಯಿಂದ ಬಡಿಸಿಕೊಂಡು ಊಟ ಮಾಡುವುದು ಇಷ್ಟವಾಗುವುದಿಲ್ಲ. ಸ್ವಲ್ಪ ಮಡಿ, ಮೈಲಿಗೆ ಜಾಸ್ತಿ...'

'ಹೌದಾ, ನಮ್ಮತ್ತೆಯೊಬ್ಬರೇ ಹಾಗೆ ಎಂದುಕೊಂಡಿದ್ದೆ. ಆದರೆ ಅವರೀಗ ತುಂಬ ಸುಧಾರಿಸಿ ಬಿಟ್ಟಿದ್ದಾರೆ, ಮೊದಲಿನಂತಿಲ್ಲ...' ಹೊರಗಡೆ ಫೋನ್ ರಿಂಗಾಯಿತು. ಯಾರಾದರೂ ತೆಗೆದುಕೊಳ್ಳುವರೇನೋ ಎಂದು ಎರಡು ನಿಮಿಷ ನೋಡಿ ಕಡೆಗೆ ಅವಳೇ ಎದ್ದಳು. ಟೀವಿ ಸೀರಿಯಲ್ ನೋಡುತ್ತಿದ್ದ ಅಮ್ಮ ಮಗನಿಗೆ ಏಳಲು ಮನಸ್ಸಾಗಲಿಲ್ಲವೇನೋ. ನಂತರ ಪ್ರಶ್ನೆಗಳ ಮೇಲೆ ಪ್ರಶ್ನೆ, 'ಯಾರ ಫೋನು? ಏನಂತೆ?' 'ವಿವೇಕ ಮಾಡಿದ್ದ. ಅಕ್ಕನನ್ನು ಕರೆದುಕೊಂಡು ಹೋಗಲು ಬರುವೆನೆಂದ. ಆದರೆ ನಾನೇ ಬೇಡ ಇವತ್ತೊಂದು ರಾತ್ರಿ ಇಲ್ಲಿಯೇ ಇರುತ್ತಾಳೆ ಎಂದೆ.' ಮತ್ತೆ ಊಟಕ್ಕೆ ಕುಳಿತುಕೊಳ್ಳುತ್ತ ಮೆಲ್ಲಗೆ, 'ನೀನು ಮನೆಯಲ್ಲಿ ಹೇಳಿ ಬರಲಿಲ್ಲವೇನಕ್ಕ?' ಎಂದಳು. 'ಇಲ್ಲವೇ, ಹಾಗೇ ಅಡ್ಡಾಡಿಕೊಂಡು ಬರೋಣವೆಂದು ಹೊರಟೆ, ನಿನ್ನ ನೆನಪಾಯಿತು ಹಾಗೇ ಇಲ್ಲಿಗೆ ಬಂದು ಬಿಟ್ಟೆ' ಎಂದೆ.

'ಅಲ್ಲಕ್ಕ, ಅಲ್ಲಿ ಎಲ್ಲರೂ ಎಷ್ಟು ಗಾಬರಿಯಾಗಿದ್ದಾರೆ ಗೊತ್ತಾ. ರಶ್ಮಿಯೇ ಹೇಳಿದಳಂತೆ, ವಿಭಾ ಅತ್ತಿಗೆಗೆ ಫೋನ್ ಮಾಡಿ ಕೇಳಿ, ಬಹುಶಃ ಅಲ್ಲಿಗೆ ಹೋಗಿರಬಹುದು ಎಂದು. ನಾನೇ ಫೋನ್ ತೆಗೆದುಕೊಂಡಿದ್ದು ಒಳ್ಳೆಯದಾಯಿತು. ಅವರ್‍ಯಾರಾದರೂ ತೆಗೆದುಕೊಂಡಿದ್ದರೆ ರಾಮಾಯಣವೇ ಆಗುತ್ತಿತ್ತು.' ಇದರಲ್ಲಿ ಅಂತಹ ತಪ್ಪೇನಾಯಿತೆಂದು ನನಗೆ ತಿಳಿಯಲಿಲ್ಲ. ಒಂದು ರೀತಿಯಲ್ಲಿ ರಾತ್ರಿ ಇಲ್ಲಿಯೇ ಇರುವುದು ಒಳ್ಳೆಯದೇ ಆಯಿತೆಂದುಕೊಂಡೆ. ಬಂದಾಗಿನಿಂದ ವಿಭಾಳೊಡನೆ ಎರಡು ಮಾತಾಡಲೂ ಆಗಿರಲಿಲ್ಲ. ರಾತ್ರಿ ಚೆನ್ನಾಗಿ ಹರಟೆ ಹೊಡೆಯಬಹುದೆಂದುಕೊಂಡೆ. ಆದರೆ ವಿಭಾ ಎಷ್ಟು ಸುಸ್ತಾಗಿದ್ದಳೆಂದರೆ ಹಾಸಿಗೆಯಲ್ಲಿ ಮಲಗುತ್ತಲೇ ನಿದ್ದೆ ಮಾಡಿ ಬಿಟ್ಟಳು. ನನಗೆ ಹೊಸ ಜಾಗ. ನಿದ್ದೆ ಬರಲಿಲ್ಲ. ಅವಳ ಉದಾಸ ಮುಖದ ಕಡೆಗೆ ನೋಡುತ್ತ ಯೋಚಿಸತೊಡಗಿದೆ. ನಾನೆಣಿಸಿದಂತೆ ಅವಳು ಸಂತೋಷದಿಂದಿಲ್ಲ. ನನಗೆ ಅವಳ ಬಗ್ಗೆ ಒಂದು ರೀತಿಯಿಂದ ಹೊಟ್ಟೆಕಿಚ್ಚು ಇತ್ತು. ಪ್ರೀತಿಸಿ ಮದುವೆಯಾದ ಗಂಡ, ಒಳ್ಳೆಯ ನೌಕರಿ, ಸುಂದರವಾದ ಮನೆ, ಹೂವಿನಂಥ ಮಗ, ಆದರೆ ಈಗ!... ಅವಳ ಉದಾಸೀನತೆಗೆ ಕಾರಣವೇನಿರಬಹುದು. ಅಮ್ಮನ ಮನೆಗೆ ಬಂದಾಗ ಖುಷಿ ಖುಷಿಯಾಗಿ ನಗು ನಗುತ್ತಲೇ ಇರುತ್ತಾಳೆ... ಅವಳ ಉದಾಸೀನತೆಗೆ ಕಾರಣ ಅಶಕ್ತತೆಯೇ– ವಾರದ ಹಿಂದಷ್ಟೇ ಡಿ.ಎನ್.ಸಿ. ಮಾಡಿಸಿಕೊಂಡಳಂತೆ. ಆಗ ನಾನು ಇದೇ ಊರಲ್ಲೇ ಇದ್ದೆನಲ್ಲ. ಕರೆದಿದ್ದರೆ ನಾಲ್ಕು ದಿನ ಬಂದಿರುತ್ತಿದ್ದೆ. ಅವಳಿಗೆ ಸ್ವಲ್ಪ ವಿಶ್ರಾಂತಿಯಾದರೂ ಸಿಗುತ್ತಿತ್ತು.

ಬೆಳಿಗ್ಗೆ ಎದ್ದು ನೋಡಿದೆ ವಿಭಾ ಆಗಲೇ ಚಪಾತಿ ಮಾಡುತ್ತಿದ್ದಳು.

'ಓ! ಆಗಲೇ ನಿನ್ನ ಸ್ನಾನವೂ ಆಯಿತೆ?'

'ಹೌದಕ್ಕ, ಅತ್ತೆಗೆ ಸ್ನಾನ ಮಾಡದೇ ಅಡಿಗೆ ಮಾಡುವುದು ಇಷ್ಟವಾಗುವುದಿಲ್ಲ.' ನಾನು ಸ್ನಾನ ಮಾಡದೆ ಅಡಿಗೆ ಮನೆಗೆ ಹೇಗೆ ಹೋಗುವುದೆಂದು ಯೋಚಿಸುತ್ತಿದ್ದೆ. ಆಗ ಅವಳೇ 'ನಿನಗೆ ಅಲ್ಲಿಗೇ ಚಹ ತಂದು ಕೊಡುತ್ತೇನೆ' ಅಂದಳು. ಅವಳಿಗೆ ಅಡಿಗೆ ಮಾಡಲು ಸಹಾಯ ಮಾಡುವ